ಅಧ್ಯಕ್ಷರು : ತಮಗೆ ಅವಕಾಶ ಕೊಡುತ್ತೇನೆ, ಕುಳಿತುಕೊಳ್ಳಿ.

ಶ್ರೀ ಕೆ. ಅಭಯಚಂದ್ರ ಜೈನ್ : ಮಾನ್ಯ ಅಧ್ಯಕ್ಷರೆ. . . ಮಂಗಳೂರಿಗೆ ಸಂಬಂಧಪಟ್ಟ ಹಾಗೆ. . . . .

ಅಧ್ಯಕ್ಷರು : ಆಯಿತು ಕೇಳಿ.

2) ವಿಷಯ : **ಮಂಗಳೂರಿನಲ್ಲಿ ಪಂಚಾಯಿತಿ ಅಧ್ಯಕ್ಷರು ಹಾಗೂ ಅಲ್ಪಸಂಖ್ಯಾತ ಶಾಲಾ ವಿದ್ಯಾರ್ಥಿಗಳ ಮೇಲೆ ಪೊಲೀಸರು ಲಾಠಿ ಪ್ರಹಾರ ಮಾಡಿರುವ ಬಗ್ಗೆ**

ಶ್ರೀ ಕೆ. ಅಭಯಚಂದ್ರ ಜೈನ್ (ಮೂಡಬಿದ್ರಿ) : ಮಂಗಳೂರು ತಾಲ್ಲೂಕು ಬಜ್ಪೆ ಸಮೀಪದ ಹಂಸ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಹಾಗೂ Morning Star ಆಂಗ್ಲ ಮಾಧ್ಯಮ ಶಾಲೆಗೆ ಹೋಗುವ ರಸ್ತೆಗೆ ಲೋಕೋಪಯೋಗಿ ಇಲಾಖೆಯವರು ಡಾಂಬರು ಹಾಗೂ ಹಂಪ್ಸ್ ಹಾಕುವ ಸಮಯದಲ್ಲಿ ಕೆಲವು ವ್ಯಕ್ತಿಗಳು ಕಾಮಗಾರಿಯನ್ನು ನಿಲ್ಲಿಸುವ ಉದ್ದೇಶದಿಂದ ತಕರಾರು ಮಾಡುತ್ತಿದ್ದು, ಸ್ಥಳೀಯ Police Sub Inspector ರವರು ವಿವಾದವನ್ನು ಶಾಂತಿಯುತವಾಗಿ ಬಗೆಹರಿಸುವ ವೇಳೆಯಲ್ಲಿ ಅಲ್ಲಿಗೆ ಆಗಮಿಸಿದ Police Inspector ರವರು ವಿನಾಕಾರಣ ಅಲ್ಲಿದ್ದ ಪಂಚಾಯತ್ ಅಧ್ಯಕ್ಷರು ಹಾಗೂ ಕೆಲವು ಅಲ್ಪಸಂಖ್ಯಾತ ಶಾಲಾ ವಿದ್ಯಾರ್ಥಿಗಳ ಮೇಲೆ ಅನಾವಶ್ಯಕವಾಗಿ ಲಾಠಿ ಪ್ರಹಾರ ಮಾಡಿ ಗಾಯಗೊಳಿಸಿರುತ್ತಾರೆ ನಂತರ ಪಂಚಾಯತ್ ಅಧ್ಯಕ್ಷರು ಮತ್ತು ವಿದ್ಯಾರ್ಥಿಗಳು ರಸ್ತೆ ತಡೆ ಮಾಡಿ ಪೊಲೀಸ್ ಜೀಪಿಗೆ ಕಲ್ಲು ಹೊಡೆದಿರುವರೆಂದು ಆಪಾದಿಸಿ. . . . .

ಅಧ್ಯಕ್ಷರು : ತಾವು ಕಳೆದ ಬಾರಿ ಪ್ರಸ್ತಾಪ ಮಾಡಿದ್ದೀರಿ. ಮಾನ್ಯ ಅಶೋಕ್‌ರವರು ಉತ್ತರ ಹೇಳುತ್ತಾರೆ.

ಶ್ರೀ ಕೆ. ಅಭಯಚಂದ್ರ ಜೈನ್ : ಕಳೆದ ವಿಧಾನಸಭೆಯಲ್ಲೇ ಪ್ರಸ್ತಾಪ ಮಾಡಿದ್ದೇನೆ.

ಶ್ರೀ ಆರ್. ಅಶೋಕ್ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ಅದನ್ನು ನನ್ನ ಗಮನಕ್ಕೂ ತಂದಿದ್ದಾರೆ. ಇದರ ಬಗ್ಗೆ ಹಿರಿಯ ಅಧಿಕಾರಿಗಳಿಗೂ ಹೇಳಿದ್ದೇನೆ. ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಹೋಗಿ ಅಲ್ಲಿ ಏನಾಗಿದೆ, ಯಾವ students ಗೆ ಹೊಡೆದಿದ್ದಾರೆ ಅವರಿಂದ ಪೊಲೀಸ್ ನವರಿಗೆ ಏನು ಅನಾಹುತವಾಗಿದೆ ಎನ್ನುವುದರ ಬಗ್ಗೆ ಸಮಗ್ರವಾದ ವರದಿ

ಕೊಟ್ಟು, ಯಾರು ತಪ್ಪು ಮಾಡಿದ್ದಾರೆ, ಸ್ಕೂಲ್, ಕಾಲೇಜಿಗೆ ಹೋಗುವಂತಹ ವಿದ್ಯಾರ್ಥಿಗಳ ಮೇಲೆ ನಮ್ಮ ಪೊಲೀಸ್‌ನವರು ಏನು ಹಲ್ಲೆ ಮಾಡಿದ್ದಾರೆ, ಆ ಬಗ್ಗೆ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿದ್ದಾರೆ ಎಂದು ಶಾಸಕರು ಏನು ಹೇಳುತ್ತಿದ್ದಾರೆ, ಅದರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಹಿರಿಯ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ನಿಜಕ್ಕೂ ಅವರು ತಪ್ಪು ಮಾಡಿರುವುದು ಕಂಡುಬಂದರೆ ಅವರ ಮೇಲೆ ಸೂಕ್ತ ಕ್ರಮ ತೆಗೆದು ಕೊಳ್ಳುತ್ತೇವೆ.

(ಗೊಂದಲ)

ಶ್ರೀ ಬಿ. ರಮಾನಾಥ ರೈ : ಇದರ ಬಗ್ಗೆ ಕಳೆದ ಬಾರಿ ಮಾನ್ಯ ಸುರೇಶ್‌ಕುಮಾರ್‌ರವರು ಉತ್ತರ ಹೇಳುವಾಗ ಹೇಳಿದ್ದರು. ಆಗ ಮಾನ್ಯ ಗೃಹ ಸಚಿವರು ಇರಲಿಲ್ಲ. ನಿರ್ದಿಷ್ಟವಾಗಿ ಸೂಕ್ತವಾದ ಕ್ರಮ ತೆಗೆದು ಕೊಳ್ಳುವುದಕ್ಕೆ ನಾನು ಸೂಚನೆ ಮಾಡುತ್ತೇನೆ ಎಂದು ಕಳೆದ ಬಾರಿ ಸದನದಲ್ಲಿ ಭರವಸೆ ನೀಡಿದ್ದರು. ತಾವು ಇವತ್ತು ಇದ್ದೀರಿ ಅದಕ್ಕೆ ಸರಿಯಾದ ತೀರ್ಮಾನ ಹೇಳಬೇಕು.

ಶ್ರೀ ಯು.ಟಿ ಖಾದರ್ : ಒಂದು ಕಡೆ ನಾವು ಮಕ್ಕಳ ವರ್ಷವನ್ನು ಇಡೀ ಪ್ರಪಂಚದಲ್ಲಿ ಆಚರಿಸುವಂತಹ ಸಂದರ್ಭದಲ್ಲಿ ಮಕ್ಕಳ ಮೇಲೆ ಲಾಠಿ ಚಾರ್ಜ್ ಮಾಡಿರುವುದನ್ನು ಕೂಡ ನಾವು ನೋಡಿ ಸುಮ್ಮನೆ ಇರುವುದಕ್ಕಾಗುತ್ತದೆಯೇ? ಸರ್ಕಾರ ಅವರನ್ನು ಅಲ್ಲಿಂದ ಬದಲಾವಣೆ ಮಾಡುವುದಲ್ಲವೇ?. . . . .

ಶ್ರೀ ಆರ್. ಅಶೋಕ್ : ಕಾಲೇಜ್ students ಮೇಲೆ ವಿನಾ ಕಾರಣ ಕೇಸ್ ಹಾಕಿದ್ದಾರೆ ಎನ್ನುವುದು ಅವರ ಪ್ರಶ್ನೆ. ಕೇಸ್ ದಾಖಲೆಯಾಗಿದೆ. ಅದರ ಬಗ್ಗೆ ನಾನು ಹಿರಿಯ ಅಧಿಕಾರಿಗಳಿಗೆ ಹೇಳಿದ್ದೇನೆ. ನಿಜವಾಗಲೂ ಅಲ್ಲಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಕೇಸು ಹಾಕಿದ್ದರೆ ಮತ್ತು ಅವರಿಗೆ ಕಿರುಕುಳವನ್ನು ಕೊಟ್ಟಿದ್ದರೆ ಅವರ ಮೇಲೆ ಕಠಿಣ ಕ್ರಮಗಳನ್ನು ತೆಗೆದು ಕೊಳ್ಳುತ್ತೇನೆ. ಅವರನ್ನು ಯಾವ ಕಾರಣಕ್ಕೂ ಕ್ಷಮಿಸುವಂತಹ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ. ಅವರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಆಯಿತು. ಮಾನ್ಯ ಸಚಿವರು ಸ್ಪಷ್ಟವಾಗಿ ಹೇಳಿದ್ದಾರೆ. Enquiry ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ.

ಶ್ರೀ ಕೆ. ಅಭಯಚಂದ್ರ ಜೈನ್ : ಪೊಲೀಸ್‌ನವರು ಜಿಲ್ಲಾ ಪಂಚಾಯಿತಿಯ ಸದಸ್ಯರ ಮೇಲೆ ಕೇಸು ಹಾಕಿದ್ದಕ್ಕಾಗಿ ಸಬ್ ಇನ್‌ಸ್ಪೆಕ್ಟರ್ ರವರನ್ನು ಸಸ್ಪೆಂಡ್ ಮಾಡಿದ್ದಾರೆ.

ಶ್ರೀ ಬಿ. ರಮಾನಾಥ ರೈ : ಪೊಲೀಸ್ ಸ್ಟೇಷನ್‌ಗೆ ಕಲ್ಲು ಬಿಸಾಡಿದ್ದಕ್ಕಾಗಿ ಅರೆಸ್ಟ್ ಮಾಡಿದ್ದಾರೆ.

ಶ್ರೀ ಕೆ. ಅಭಯಚಂದ್ರ ಜೈನ್ : ಒಂದೇ ದಿನದಲ್ಲಿ ಎರಡು ಕೇಸನ್ನು ಹಾಕಿದ್ದಾರೆ.

ಅಧ್ಯಕ್ಷರು : ನಾನು ಅವರಿಗೆ ಹೇಳುತ್ತಿದ್ದೇನೆ. ಅವರು ಕ್ರಮ ತೆಗೆದು ಕೊಳ್ಳುತ್ತಾರೆ.

ಶ್ರೀ ಬಿ. ರಮಾನಾಥ ರೈ : ಮಾನ್ಯ ಗೃಹ ಸಚಿವರು ನಮಗೆ ನ್ಯಾಯವನ್ನು ಒದಗಿಸುತ್ತಾರೆ. ಇದು ಏತಕ್ಕಾಗಿ ತಡವಾಗಿದೆ ಗೊತ್ತಿಲ್ಲ.

ಶ್ರೀ ಆರ್. ಅಶೋಕ್ : ನಾನು ತಮಗೆ ಖಂಡಿತವಾಗಿ ನ್ಯಾಯವನ್ನು ಒದಗಿಸುತ್ತೇನೆ.

ಅಧ್ಯಕ್ಷರು : ಈಗ ಪ್ರಕಾಶ್ ಹುಕ್ಕೇರಿಯವರದ್ದು.

3) ವಿಷಯ : ದೂದ್‌ಗಂಗಾ ನದಿಯಿಂದ ಹೆಚ್ಚುವರಿ ನೀರನ್ನು ಬಿಡುವ ಬಗ್ಗೆ

ಶ್ರೀ ಪ್ರಕಾಶ್ ಬಿ. ಹುಕ್ಕೇರಿ (ಚಿಕ್ಕೋಡಿ –ಸದಲಗ) : ಮಾನ್ಯ ಅಧ್ಯಕ್ಷರೆ, ದೂದ್ ಗಂಗಾ ನದಿಯಿಂದ ಹೆಚ್ಚುವರಿಯಾಗಿ 4 ಟಿಎಂಸಿ ನೀರನ್ನು ಕಾಳಮೋಡಿ ಡ್ಯಾನಿಂದ ಬಿಡಲು ನಾನು ಶೂನ್ಯವೇಳೆಯಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರಲ್ಲಿ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಅತ್ಯಂತ ಹಿರಿಯ ಸದಸ್ಯರಾದ ಶ್ರೀ ಪ್ರಕಾಶ್ ಹುಕ್ಕೇರಿಯವರು ಇವರ ನೇತೃತ್ವದಲ್ಲಿ ನಾವು ಮಹಾರಾಷ್ಟ್ರಕ್ಕೆ ಹೋಗಿದ್ದೆವು. ಅಲ್ಲಿಯ ನೀರಾವರಿ ಸಚಿವರೊಂದಿಗೆ ಒಂದು ತಾಸು ಸುದೀರ್ಘವಾಗಿ ಚರ್ಚೆ ಮಾಡಿದ್ದೇವೆ. 4 ಟಿಎಂಸಿ ನೀರು ಬೇಕೆನ್ನುವುದು ಏನು ಇದೆ ಅದರ ಬಗ್ಗೆಯೂ ಕೂಡ ಚರ್ಚೆ ಮಾಡಿದ್ದೇವೆ. ಒಂದು ಟಿಎಂಸಿ ನೀರಿನ ಬಗ್ಗೆ ಅಲ್ಲಿಯ ಡಿ.ಸಿ. ಯವರು ಮತ್ತು ಪ್ರಕಾಶ್ ಹುಕ್ಕೇರಿಯವರು ಮತ್ತು ಆ ಭಾಗದವರೆಲ್ಲರೂ ಸೇರಿ ನೀರು ಬಿಡುಗಡೆ ಮಾಡುವ ಬಗ್ಗೆ ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಿದ್ದಾರೆ. ಬಹುತೇಕವಾಗಿ ಮಾನ್ಯ ಮುಖ್ಯ